# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2351 |
| ಸದಸ್ಯರ ಹೆಸರು | : | ಶ್ರೀ. ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21.03.2022. |
| ಉತ್ತರಿಸುವವರು | : | ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಕಪ್ಪತ್ತ ಗುಡ್ಡಕ್ಕೆ ಎಷ್ಟು ಬಾರಿ ಬೆಂಕಿ ತಗುಲಿದೆ ಇದರಿಂದ ಸಸ್ಯ ಹಾಗೂ ಪ್ರಾಣಿ ಸಂಕುಲಕ್ಕೆ ಆದ ಹಾನಿ ಎಷ್ಟು; (ವರ್ಷವಾರು ಮಾಹಿತಿ ನೀಡುವುದು) | ಕಳೆದ 3 ವರ್ಷಗಳಲ್ಲಿ ಕಪ್ಪತ್ತಗುಡ್ಡದಲ್ಲಿ ಉಂಟಾದ ಬೆಂಕಿ ಪ್ರಕರಣಗಳ ವಿವರ ಈ ಕೆಳಕಂಡತಿದೆ:-<br><br>ವರ್ಷ / ಬೆಂಕಿ ಪ್ರಕರಣ ಸಂಖ್ಯೆ / ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)<br>2018-19 / 7 / 53<br>2019-20 / 4 / 120<br>2020-21 / 14 / 1086.01<br><br>ಈ ಪ್ರದೇಶಗಳು ಪ್ರಾಥಮಿಕವಾಗಿ ಮಡ್ಡಿ, ಥುಪ್ಪಿ ಮತ್ತು ನೋನಿ (ಮೊರಿಂಡಾ ಟಿಂಕ್ಟೋರಿಯಾ) ಮತ್ತು ಬದೆ ಹುಲ್ಲು (ಸಿಂಬೊಪುಗೊನ್ ಕೊಲೊರೇಟಸ್) ಮತ್ತು ಇತರ ಸ್ಥಳೀಯ ಹುಲ್ಲುಗಳಿಂದ ಆವೃತವಾದ ತೆರದ ಕುರುಚಲು ಅರಣ್ಯಗಳನ್ನು ಹೊಂದಿದ್ದು, ಅವು ಬೆಂಕಿ ಪ್ರತಿರೋಧಕ ಗುಣವನ್ನು ಹೊಂದಿವೆ. ಈ ಬೆಂಕಿಯು ಹೆಚ್ಚಾಗಿ ನೆಲದ ಬೆಂಕಿಯಾಗಿದ್ದು, ಹುಲ್ಲು ಮತ್ತು ನೆಲ ಮಟ್ಟದ ಸಸ್ಯಗಳಿಗೆ ಮಾತ್ರ ಹಾನಿಯಾಗಿದ್ದು, ಮರಗಳಿಗೆ ಹಾಗೂ ಪ್ರಾಣಿ ಸಂಕುಲಕ್ಕೆ ಹಾನಿಯಾದ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಆ) | ಪ್ರತಿ ವರ್ಷ ಯಾವ ಗ್ರಾಮಗಳ ವ್ಯಾಪ್ತಿಯಲ್ಲಿ ಅರಣ್ಯ ಪ್ರದೇಶಕ್ಕೆ ಹಾಗೂ ಯಾವ ತಿಂಗಳಲ್ಲಿ ಪದೇ ಪದೇ ಬೆಂಕಿ ಬೀಳುತ್ತಿದೆ ಎಂಬುದರ ಬಗ್ಗೆ ಸರ್ಕಾರ ಅಧ್ಯಯನ ನಡೆಸಿದೆಯೇ; (ಹಾಗಿದ್ದಲ್ಲಿ ಈ ಬಗ್ಗೆ ವಿವರವಾದ ಮಾಹಿತಿ ನೀಡುವುದು) | ಸಾಮಾನ್ಯವಾಗಿ ಡೋಣಿ, ಡಂಬಳ, ಕೆಲೂರು ಮತ್ತು ಹಿರೇವಡಟ್ಟಿ ಮುಂತಾದ ಗ್ರಾಮಗಳ ವ್ಯಾಪ್ತಿಯಲ್ಲಿ ಸೇರಿದ ಅರಣ್ಯ ಪ್ರದೇಶದಲ್ಲಿ ಬೇಸಿಗೆ ಕಾಲದಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತದೆ.<br><br>ಮುಂದುವರೆದು, ಈ ಪ್ರದೇಶದಲ್ಲಿ ಪದೇ ಪದೇ ಬೀಳುತ್ತಿರುವ ಬೆಂಕಿ ಕುರಿತು ಪ್ರತ್ಯೇಕವಾಗಿ ಅಧ್ಯಯನ ನಡೆಸಿರುವುದಿಲ್ಲ. |
| ಇ) | ಬೆಂಕಿ ಬೀಳಲು ಕಾರಣಗಳನು; (ವಿವರ ನಿಡುವುದು) | 1. ಕಪ್ಪತಗುಡ್ಡದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹೆಚ್ಚಿನ ಹಳ್ಳಿಗರು ಹುಲ್ಲುಗಳು ಮತ್ತು ಇತರ ನೆಲದ ಸಸ್ಯಗಳು ಹೇರಳವಾಗಿ ಲಭ್ಯವಿರುವುದರಿಂದ ಮೇಕೆ ಮತ್ತು ಕುರಿಗಳನ್ನು ಮೇಯಿಸಲು ಕಪ್ಪತಗುಡ್ಡಕ್ಕೆ ಕೊಂಡೊಯ್ಯುತ್ತಾರೆ. ಪ್ರತಿ ಬಾರಿ ನೆಲಕ್ಕೆ ಬೆಂಕಿ ಹಚ್ಚಿದಾಗ, ಮಳೆಗಾಲದ ನಂತರ ಉತ್ತಮವಾದ ಹೊಸ ಸಸ್ಯವರ್ಗ ಮತ್ತು ಹುಲ್ಲುಗಳು ಕಾಣಿಸಿಕೊಳ್ಳುತ್ತವೆ. ಇದು ಸಾಕು ಪ್ರಾಣಿಗಳಿಗೆ ಉತ್ತಮ ಮೇವುವನ್ನು ನೀಡಲು ಸಹಾಯ ಮಾಡುತ್ತದೆ ಎಂಬ ಸ್ಥಳೀಯರ ನಂಬಿಕೆ ಇದೆ. |

.....2

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | 2. ಕಪ್ಪತಗುಡ್ಡ ವನ್ಯಜೀವಿ ಅಭಯಾರಣ್ಯವನ್ನು ದಾಟಲು ಹಲವು ರೂಢಿಗತವಾಗಿ ಬಳಕೆಯಲ್ಲಿರುವ ರಸ್ತೆಗಳಿವೆ. ಇವುಗಳನ್ನು ಸಾರ್ವಜನಿಕರು ಬಳಸುತ್ತಾರೆ. ಬೆಂಕಿ ಬೀಳುವ ಕಾಲದಲ್ಲಿ ರಸ್ತೆಗಳ ಮುಚ್ಚುವಿಕೆಯು ಸಾರ್ವಜನಿಕರಿಂದ ತೀವ್ರ ಪ್ರತಿರೋಧವನ್ನು ಎದುರಿಸುತ್ತಿದೆ. ಈ ರಸ್ತೆಗಳಿಂದಾಗಿ ಜನರ ಓಡಾಟಕ್ಕೆ ಮಿತಿ ಹಾಕುವಂತಿಲ್ಲ.<br>3. ಅಕ್ರಮ ಕಳ್ಳಸಾಗಾಣಿಕೆ ಹಾಗೂ ಅಕ್ರಮ ಗಣಿಗಾರಿಕೆಯಂತಹ ಪ್ರಕರಣಗಳಲ್ಲಿ ತೊಡಗಿರುವಂತಹ ಅಸಾಮಾಜಿಕ ತತ್ವಗಳು ಅರಣ್ಯಕ್ಕೆ ಬೆಂಕಿ ಹಚ್ಚಿದ ಸಂದರ್ಭಗಳಿವೆ.<br>4. ಅರಣ್ಯ ಒತ್ತುವರಿಯನ್ನು ವಿಸ್ತರಿಸಲು/ ಹೊಸ ಒತ್ತುವರಿಯನ್ನು ಮಾಡಲು ಪ್ರಯತ್ನಿಸುವವರ ವಿರುದ್ಧ ಅರಣ್ಯ ಇಲಾಖೆಯು ತೆರವಿಗೆ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಅವರು ಪ್ರತೀಕಾರವಾಗಿ ಬೆಂಕಿ ಹಚ್ಚುವ ಸಾಧ್ಯತೆಗಳು ಇರುತ್ತವೆ. |
| ಈ) | ಪದೇ ಪದೇ ಬೆಂಕಿ ಬೀಳುವುದನ್ನು ತಡೆಗಟ್ಟಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ? (ಮಾಹಿತಿ ನೀಡುವುದು); | ಪದೇ ಪದೇ ಬೆಂಕಿ ಬೀಳುವುದನ್ನು ತಡೆಗಟ್ಟಲು ಅನುದಾನದ ಲಭ್ಯತೆಗೆ ಅನುಗುಣವಾಗಿ ಅರಣ್ಯ ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>1. ಪ್ರತಿ ವರ್ಷ ಸುಮಾರು 25 ಅಡಿ ಅಗಲದ ಬೆಂಕಿರೇಖೆಗಳನ್ನು ಹಾಕಲಾಗುತ್ತದೆ/ ನಿರ್ವಹಿಸಲಾಗುತ್ತದೆ.<br>2. ಪವನ ವಿದ್ಯುತ್ ಯೋಜನೆಗಳಿಗೆ ಬರುವ ಅರಣ್ಯ ಪ್ರದೇಶಗಳಲ್ಲಿ ಹಾಗೂ ವಿದ್ಯುತ್ ಪ್ರಸರಣ ಮಾರ್ಗಗಳ ಅಡಿಯಲ್ಲಿ ಬೆಂಕಿರೇಖೆಗಳನ್ನು ಅರಣ್ಯ ಇಲಾಖೆಯ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಸಂಬಂಧಿಸಿದ ಉಪಯೋಗಿ ಸಂಸ್ಥೆಗಳು ಕೈಗೊಳ್ಳುತ್ತವೆ.<br>3. ಅರಣ್ಯ ನೆಡುತೋಪುಗಳ ಸುತ್ತಲೂ ಬೆಂಕಿರೇಖೆಗಳನ್ನು ನಿರ್ಮಿಸಲಾಗುತ್ತದೆ.<br>4. ಬೆಂಕಿ ರಕ್ಷಣಾ ಶಿಬಿರಗಳನ್ನು ಸ್ಥಾಪಿಸಲಾಗುವ ಜೊತೆಗೆ ಹೆಚ್ಚುವರಿ ಬೆಂಕಿ ಕಾವಲುಗಾರರನ್ನು ಅವಶ್ಯಕತೆಗೆ ಅನುಗುಣವಾಗಿ ಬೇಸಿಗೆ ಕಾಲದಲ್ಲಿ ತಾತ್ಕಾಲಿಕವಾಗಿ ನಿಯೋಜಿಸಲಾಗುತ್ತಿದೆ.<br>5. ಅರಣ್ಯ ಸಿಬ್ಬಂದಿಗಳಿಗೆ ಅಗ್ನಿಶಾಮಕ ರಕ್ಷಣಾ ಸಾಧನ ಮತ್ತು ಪರಿಕರಗಳನ್ನು ಸರಬರಾಜು ಮಾಡಲಾಗುತ್ತದೆ.<br>6. ಸ್ಥಳೀಯ ಜನರಿಗೆ ಅರಣ್ಯವನ್ನು ಬೆಂಕಿಯಿಂದ ರಕ್ಷಣೆ ಮಾಡುವ ಕುರಿತು ಜಾಗೃತಗೊಳಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಸಂಘ ಸಂಸ್ಥೆಗಳು ಮತ್ತು ಗ್ರಾಮ ಅರಣ್ಯ ಸಮಿತಿಗಳನ್ನು ಬೆಂಕಿ ನಿಯಂತ್ರಣ ಕಾರ್ಯಕ್ರಮದಲ್ಲಿ ನಿಯೋಜಿಸಿ ಬೆಂಕಿಯಿಂದ ಅರಣ್ಯ ಪ್ರದೇಶವನ್ನು ರಕ್ಷಣೆ ಮಾಡಲಾಗುತ್ತಿದೆ. |

ಸಂಖ್ಯೆ: ಅಪಜೀ 63 ಎಫ್ ಡಬ್ಲ್ಯೂಎಲ್ 2022

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು